| Roll No. | | | | | | | | | | | | Serial No. of Q. C. A. B. |
|---|---|---|---|---|---|---|---|---|---|---|---|---|

ಒಟ್ಟು ಪ್ರಶ್ನೆಗಳ ಸಂಖ್ಯೆ : 56 ]
Total No. of Questions : 56 ]

[ ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 24
[ Total No. of Printed Pages : 24

**ಸಂಕೇತ ಸಂಖ್ಯೆ : 85-K**
**Code No. : 85-K**

# ವಿಷಯ : ಸಮಾಜ ವಿಜ್ಞಾನ
# Subject : SOCIAL SCIENCE

( ಕನ್ನಡ ಭಾಷಾಂತರ )
( Kannada Version )

ದಿನಾಂಕ : 13. 04. 2011 ]
ಸಮಯ : ಬೆಳಿಗ್ಗೆ 10-30 ರಿಂದ ಮಧ್ಯಾಹ್ನ 1-45 ರವರೆಗೆ ]
ಪರಮಾವಧಿ ಅಂಕಗಳು : 100 ]

[ Date : 13. 04. 2011
[ Time : 10-30 A.M. to 1-45 P.M
[ Max. Marks : 100

**FOR OFFICE USE ONLY**

| Q. No. | Marks | Q. No. | Marks | Q. No. | Marks | Q. No. | Marks | Q. No. | Marks |
|---|---|---|---|---|---|---|---|---|---|
| 1. | | 13. | | 25. | | 37. | | 49. | |
| 2. | | 14. | | 26. | | 38. | | 50. | |
| 3. | | 15. | | 27. | | 39. | | 51. | |
| 4. | | 16. | | 28. | | 40. | | 52. | |
| 5. | | 17. | | 29. | | 41. | | 53. | |
| 6. | | 18. | | 30. | | 42. | | 54. | |
| 7. | | 19. | | 31. | | 43. | | 55. | |
| 8. | | 20. | | 32. | | 44. | | 56. | |
| 9. | | 21. | | 33. | | 45. | | ∞ | |
| 10. | | 22. | | 34. | | 46. | | ∞ | |
| 11. | | 23. | | 35. | | 47. | | ∞ | |
| 12. | | 24. | | 36. | | 48. | | ∞ | |
| | | | | | | | | ***Total Marks*** | |

| **Total Marks in words** | | **Grand Total** | |
|---|---|---|---|

| | | | |
|---|---|---|---|
| 1. ✓ | | | |
| 2. ✓ | | ✓ | ✓ |
| *Signature of Evaluators* | *Registration No.* | *Signature of the Deputy Chief* | *Signature of the Room Invigilator* |

*ಸಾಮಾನ್ಯ ಸೂಚನೆಗಳು :*

i) ಈ ಪ್ರಶ್ನೋತ್ತರ ಕಿರು ಪುಸ್ತಕವು ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಒಟ್ಟು 56 ಪ್ರಶ್ನೆಗಳನ್ನು ಹೊಂದಿದೆ.

ii) ಪ್ರತಿಯೊಂದು ವಸ್ತುನಿಷ್ಠ ಮಾದರಿ ಪ್ರಶ್ನೆಗೆ ಉತ್ತರಕ್ಕಾಗಿ ಜಾಗವನ್ನು ಕೊಡಲಾಗಿದೆ. ಸರಿಯಾದ ಉತ್ತರವನ್ನು ಆರಿಸಿ ಕೊಟ್ಟಿರುವ ಜಾಗದಲ್ಲಿ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ.

iii) ವಿಷಯನಿಷ್ಠ ಮಾದರಿ ಪ್ರಶ್ನೆಯ ಉತ್ತರಗಳಿಗೆ ಸಾಕಷ್ಟು ಜಾಗವನ್ನು ಕೊಡಲಾಗಿದೆ. ಉತ್ತರಗಳನ್ನು ಆಯಾ ಜಾಗಗಳಲ್ಲಿಯೇ ಬರೆಯಿರಿ.

iv) ವಸ್ತುನಿಷ್ಠ ಮಾದರಿ ಮತ್ತು ವಿಷಯನಿಷ್ಠ ಮಾದರಿ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಅನುಸರಿಸಿ.

v) ವಿದ್ಯಾರ್ಥಿಗಳು ಪೆನ್ಸಿಲ್‌ನಿಂದ (ಸೀಸದ ಕಡ್ಡಿ) ಉತ್ತರಗಳನ್ನು ಬರೆಯಬಾರದು. ಪೆನ್ಸಿಲ್‌ನಿಂದ ಉತ್ತರ ಬರೆದಲ್ಲಿ ಮೌಲ್ಯಮಾಪನಕ್ಕೆ ಪರಿಗಣಿಸಲಾಗುವುದಿಲ್ಲ. (ನಕ್ಷೆಗಳು, ರೇಖಾಚಿತ್ರಗಳು ಮತ್ತು ಭೂಪಟಗಳನ್ನು ಬಿಟ್ಟು).

vi) ಬಹು-ಆಯ್ಕೆ, ಖಾಲಿ ಸ್ಥಳಗಳನ್ನು ಭರ್ತಿ ಮಾಡುವುದು, ಹೊಂದಿಸಿ ಬರೆಯುವ ಪ್ರಶ್ನೆಗಳ ವಿಷಯದಲ್ಲಿ ಕೆರೆದು ಅಳಿಸುವುದು / ತಿದ್ದಿ ಬರೆಯುವುದು / ಗುರುತಿಸುವುದು ಮಾಡಿದಲ್ಲಿ ಮೌಲ್ಯಮಾಪನಕ್ಕೆ ಅನರ್ಹವಾಗುತ್ತದೆ.

vii) ಪ್ರಶ್ನೆ ಪತ್ರಿಕೆಯನ್ನು ಓದಲು 15 ನಿಮಿಷಗಳ ಹೆಚ್ಚಿನ ಕಾಲಾವಕಾಶ ನೀಡಲಾಗಿದೆ.

I. ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಸೂಚಿಸಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಉತ್ತರಕ್ಕೆ ಕೊಟ್ಟಿರುವ ಜಾಗದಲ್ಲಿಯೇ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ : $15 \times 1 = 15$

1. ಆಂಗ್ಲರ ಆಡಳಿತ ಕಾಲದಲ್ಲಿ ಭಾರತದ ಗವರ್ನರ್ ಜನರಲ್‌ನನ್ನು ವೈಸ್‌ರಾಯ್ ಎಂದು ನಾಮಕರಣ ಮಾಡಿದ ಕಾಯ್ದೆ

   (A) ಕ್ರಿ.ಶ. 1909 ರ ಭಾರತದ ಕೌನ್ಸಿಲ್ ಕಾಯ್ದೆ

   (B) ಕ್ರಿ.ಶ. 1813 ರ ಚಾರ್ಟರ್ ಶಾಸನ

   (C) ಕ್ರಿ.ಶ. 1858 ರ ಭಾರತ ಸರ್ಕಾರದ ಶಾಸನ

   (D) ಕ್ರಿ.ಶ. 1853 ರ ಚಾರ್ಟರ್ ಶಾಸನ

   *ಉತ್ತರ :* ____________________

2. ಅಂಕೋಲದಲ್ಲಿ ಉಪ್ಪನ್ನು ತಯಾರಿಸಿ ಕಾನೂನು ಭಂಗ ಚಳುವಳಿಯನ್ನು ಕೈಗೊಂಡದ್ದು ಇವರ ನಾಯಕತ್ವದಲ್ಲಿ :

(A) ಎಂ.ಜಿ. ನಾಡಕರ್ಣಿ

(B) ಮಂಜಪ್ಪ ಹರ್ಡಿಕರ್

(C) ಆರ್.ಆರ್. ದಿವಾಕರ್

(D) ಟಿ. ಸಿದ್ದಲಿಂಗಯ್ಯ

*ಉತ್ತರ :* ______________________________

3. ಕ್ರಿ.ಶ. 1858 ರಲ್ಲಿ ಬ್ರಿಟಿಷ್ ರಾಣಿ ವಿಕ್ಟೋರಿಯಳ ಘೋಷಣೆಯನ್ನು 'ಭಾರತದ ಮ್ಯಾಗ್ನಕಾರ್ಟಾ' ಎಂದು ಕರೆಯಲಾಗಿದೆ. ಕಾರಣ

(A) ತೆರಿಗೆ ಪದ್ಧತಿಯನ್ನು ಪುನರ್ರಚಿಸಲು

(B) ಜನರ ಹಕ್ಕುಗಳನ್ನು ರಕ್ಷಿಸಲು

(C) ಸುಭದ್ರ ಸರ್ಕಾರ ನೀಡಲು

(D) ಎಲ್ಲಾ ಭಾರತೀಯ ಸೈನಿಕರಿಗೆ ಕ್ಷಮಾದಾನವನ್ನು ಅನುಮತಿಸಲು

*ಉತ್ತರ :* ______________________________

4. ಭಾರತದ ಅರಸರಿಗೆ ರಾಜಧನ ಕೊಡಲು ನಿರ್ಧರಿಸಲಾಯಿತು. ಕಾರಣ

(A) ಎಲ್ಲಾ ಭಾರತೀಯರಿಗೂ ಸಮಾನತೆ ನೀಡಲು

(B) ರಾಜಮನೆತನದ ಸ್ಥಾನಮಾನ ಕಾಪಾಡಲು

(C) ಭಾರತದ ಎಲ್ಲಾ ಪ್ರಾಂತೀಯ ರಾಜ್ಯಗಳನ್ನು ವಿಲೀನಗೊಳಿಸಲು

(D) ಭಾರತ ಮತ್ತು ಪಾಕಿಸ್ತಾನವನ್ನು ಎಂದು ವಿಭಾಗಿಸಲು

*ಉತ್ತರ :* ______________________________

5. ಟೊಕುಗಾವಾ ಆಡಳಿತ ಕೊನೆಗೊಳ್ಳಲು ಕಾರಣ

(A) ಡಯಟ್‌ನ ಸ್ಥಾಪನೆ

(B) ಐರೋಪ್ಯರು ಜಪಾನ್‌ನೊಡನೆ ವ್ಯಾಪಾರ ಆರಂಭಿಸಿದರು

(C) ಪರ್ಲ್ ಹಾರ್ಬರ್ ಮೇಲಿನ ದಾಳಿ

(D) ಮೇಜಿ ಪುನರುತ್ಥಾನ (ಪುನರಾಗಮನ)

*ಉತ್ತರ :* ______________________

6. ಹಿಟ್ಲರನು ಆತ್ಮಹತ್ಯೆ ಮಾಡಿಕೊಳ್ಳಲು ಕಾರಣ

(A) ಜರ್ಮನಿಯ ಸೈನ್ಯವನ್ನು ಬೆಲ್ಜಿಯಂನಿಂದ ಹೊರದೂಡಿದ್ದು

(B) ರಷ್ಯಾ ಜರ್ಮನಿಯ ಮೇಲೆ ದಾಳಿ ಮಾಡಿದ್ದು

(C) ಇಂಗ್ಲೆಂಡ್ ಮತ್ತು ಫ್ರಾನ್ಸ್ ಜರ್ಮನಿಯ ಮೇಲೆ ಯುದ್ಧ ಸಾರಿದ್ದು

(D) ಮಿತ್ರ ಪಕ್ಷಗಳು ಜರ್ಮನಿಯನ್ನು ವಶಪಡಿಸಿಕೊಂಡದ್ದು

*ಉತ್ತರ :* ______________________

7. ಜಪಾನ್ ಪರ್ಲ್ ಹಾರ್ಬರ್‌ನ ಮೇಲೆ ದಾಳಿ ಮಾಡಿಲ್ಲದಿದ್ದರೆ, ಆಗ

(A) ಅಮೆರಿಕಾ ಅಲಿಪ್ತತೆಯನ್ನು ಅನುಸರಿಸುತ್ತಿತ್ತು

(B) ಹೆಚ್ಚು ರೀತಿಯ ಹಾನಿ ಸಂಭವಿಸುತ್ತಿರಲಿಲ್ಲ

(C) ಜರ್ಮನಿಯು ಯುದ್ಧವನ್ನು ಗೆಲ್ಲಬಹುದಿತ್ತು

(D) ಜಪಾನ್ ಶರಣಾಗತವಾಗುತ್ತಿರಲಿಲ್ಲ

*ಉತ್ತರ :* ______________________

8. ಭಾರತದಲ್ಲಿ ಶಿಶು ಮರಣದ ಸಂಖ್ಯೆ ಹೆಚ್ಚಿರುವುದಕ್ಕೆ ಕಾರಣ

(A) ಪೌಷ್ಠಿಕತೆಯ ಅಭಾವ

(B) ಸಾಮಾಜಿಕ ಪರಿಸರ

(C) ಶಿಶು ಕಲ್ಯಾಣ ಕಾರ್ಯಕ್ರಮಕ್ಕೆ ಬರುವ ವಿಘ್ನಗಳು

(D) ಅನಕ್ಷರತೆ

*ಉತ್ತರ :* ______________________________

9. ಕ್ರಿ.ಶ. 1985 ರಲ್ಲಿ ಸಾರ್ಕ್‌ನ ( SAARC ) ಚಿಹ್ನೆ ಏಳು ದಳಗಳ ಹೂವು. ಹೂವಿನ ದಳಗಳು ಸಾಂಕೇತಿಕವಾಗಿ ಏಳು

(A) ಉದ್ದೇಶಗಳು

(B) ರಾಷ್ಟ್ರಗಳು

(C) ಪ್ರತಿನಿಧಿಗಳು

(D) ಅಡೆತಡೆಗಳು

*ಉತ್ತರ :* ______________________________

10. ನೈರುತ್ಯ ಮಾನ್‌ಸೂನ್ ಮಾರುತಗಳು ಎರಡು ಶಾಖೆಗಳಾಗಿ ವಿಭಾಗವಾಗಲು ಕಾರಣ

(A) ಫೆರಲ್‌ನ ನಿಯಮ

(B) ಸಮಭಾಜಕ ವೃತ್ತ

(C) ಪಶ್ಚಿಮ ಘಟ್ಟಗಳು

(D) ಪರ್ಯಾಯ ದ್ವೀಪದ ಸ್ವರೂಪ

*ಉತ್ತರ :* ______________________________

11. ನನ್ನಲ್ಲಿರುವ ಸಸ್ಯಗಳು ಆಳವಾದ ಬೇರುಗಳನ್ನು ಹೊಂದಿದ್ದು, ಎಲೆಗಳು ಮಂದವಾಗಿದ್ದು, ಮುಳ್ಳುಗಳಿಂದ ಕೂಡಿರುತ್ತದೆ. ನಾನು ಈ ಸಸ್ಯವರ್ಗಕ್ಕೆ ಸೇರುತ್ತೇನೆ.

(A) ಮರುಭೂಮಿ ಸಸ್ಯವರ್ಗ

(B) ಉಷ್ಣವಲಯದ ಎಲೆ ಉದುರುವ ಕಾಡು

(C) ಮ್ಯಾಂಗ್ರೂವ್ ಕಾಡು

(D) ಉಷ್ಣವಲಯದ ಮುಳ್ಳು ಗಿಡಗಂಟಿ ಕಾಡು

*ಉತ್ತರ :* ____________________

12. ಕೃತಕ ಉಪಗ್ರಹಗಳಿಂದ ಗೃಹಬಳಕೆಯ ಪಾತ್ರೆಗಳ ತಯಾರಿಕೆಯವರೆಗೆ ನನ್ನನ್ನು ಬಳಸುತ್ತಾರೆ.

(A) ಮ್ಯಾಂಗನೀಸ್

(B) ಅಭ್ರಕ

(C) ಕಬ್ಬಿಣ

(D) ಅಲ್ಯೂಮಿನಿಯಂ

*ಉತ್ತರ :* ____________________

13. ಗುಡಿ ಕೈಗಾರಿಕೆಗಳನ್ನು ಪ್ರೋತ್ಸಾಹಿಸಿದವರು

(A) ಇಂದಿರಾ ಗಾಂಧಿ

(B) ಮಹಾತ್ಮ ಗಾಂಧಿ

(C) ರಾಜೀವ್ ಗಾಂಧಿ

(D) ಜವಾಹರ್‌ಲಾಲ್ ನೆಹರೂ

*ಉತ್ತರ :* ____________________

14. ಕರ್ನಾಟಕದಲ್ಲಿ ಕಾಗದದ ಕಾರ್ಖಾನೆಗಳು ಸ್ಥಾಪಿತವಾಗಿರುವ ಪ್ರದೇಶಗಳ ಸರಿಯಾದ ಪಟ್ಟಿ

(A) ಮಂಡ್ಯ, ನೇಪಾನಗರ, ಭದ್ರಾವತಿ

(B) ದಾಂಡೇಲಿ, ಟಿಟಾಗರ್, ಮಂಡ್ಯ

(C) ಭದ್ರಾವತಿ, ಮಂಡ್ಯ, ದಾಂಡೇಲಿ

(D) ದಾಂಡೇಲಿ, ನೇಪಾನಗರ, ಭದ್ರಾವತಿ

*ಉತ್ತರ :* ____________________

15. ಬೆಳೆಯು ನಷ್ಟವಾದಾಗ ರೈತರಿಗೆ ನೀಡುವ ಭರವಸೆಯನ್ನು ಈ ರೀತಿ ಕರೆಯುತ್ತಾರೆ :

(A) ಬೆಳೆ ಭರವಸೆ

(B) ವ್ಯವಸಾಯ ಭರವಸೆ

(C) ಬೆಳೆ ವಿಮೆ

(D) ರೈತರ ವಿಮೆ

*ಉತ್ತರ :* ____________________

II. ಈ ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟಿರುವ ಜಾಗಗಳನ್ನು ಸೂಕ್ತ ಪದಗಳಿಂದ ತುಂಬಿ ಬರೆಯಿರಿ : 5 × 1 = 5

16. ನಮ್ಮ ದೇಶದ ಯೋಜನಾ ಆಯೋಗದ ಮೊದಲು ಅಧ್ಯಕ್ಷರು ..............................................

17. ಗಂಗಾ ನದೀ ಮುಖಜ ಭೂಮಿಯಲ್ಲಿ ಕಂಡುಬರುವ ಮ್ಯಾಂಗ್ರೂವ್ ಕಾಡುಗಳನ್ನು ............................... ಎನ್ನುತ್ತಾರೆ.

18. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಆಯೋಗ ರಚನೆಯಾದದ್ದು ಕ್ರಿ.ಶ. ..............................ರಲ್ಲಿ.

19. ಕ್ರಿ.ಶ. 1963 ರಲ್ಲಿ ಒಬೋಟೆರವರ ನೇತೃತ್ವದಲ್ಲಿ ಸ್ವತಂತ್ರವಾದ ದೇಶ ..........................................

20. ಮರಾಠರ ಕೊನೆಯ ಪೇಶ್ವೆ ..........................................................................................

III. 21. ಈ ಕೆಳಗೆ ಕೊಟ್ಟಿರುವ **A** ಪಟ್ಟಿಯಲ್ಲಿನ ಅಂಶಗಳನ್ನು **B** ಪಟ್ಟಿಯಲ್ಲಿನ ಅಂಶಗಳೊಡನೆ ಹೊಂದಿಸಿ ಬರೆಯಿರಿ : $5 \times 1 = 5$

| ***A* ಪಟ್ಟಿ** | ***B* ಪಟ್ಟಿ** |
| --- | --- |
| a) ರೈತವಾರಿ ಪದ್ಧತಿ | i) ಬಾಬು ರಾಜೇಂದ್ರ ಪ್ರಸಾದ್ |
| b) ಕ್ರಿ.ಶ. 1909 ರಲ್ಲಿ ಭಾರತದ ವೈಸ್‌ರಾಯ್ | ii) ವಿಲಿಯಂ ಬೆಂಟಿಂಕ್ |
| c) ಭಾರತ ಸಂವಿಧಾನ ರಚನಾ ಸಮಿತಿಯ ಅಧ್ಯಕ್ಷರು | iii) ಚೆಲ್ಮ್ಸ್‌ಫೋರ್ಡ್ |
| d) ಕ್ರಿ.ಶ. 1929ರಲ್ಲಿ ಸತಿ ಪದ್ಧತಿಯನ್ನು ನಿಷೇಧಿಸಿದನು | iv) ಮುನ್ರೋ |
| e) ದುರ್ಬಲ ವರ್ಗಗಳ ಸಂಘವನ್ನು ಸ್ಥಾಪಿಸಿದರು | v) ವಿಠಲ್ ರಾಮ್‌ಜಿ ಶಿಂಧೆ |
| | vi) ಅಂಬೇಡ್ಕರ್ |
| | vii) ತಾರಾಬಾಯಿ ಶಿಂಧೆ |
| | viii) ಮಿಂಟೊ |

*ಉತ್ತರಗಳು :* a) __________

b) __________

c) __________

d) __________

e) __________

IV. ಈ ಕೆಳಗಿನ ಪ್ರಶ್ನೆಗಳಿಗೆ **ಒಂದೊಂದು** ವಾಕ್ಯದಲ್ಲಿ ಉತ್ತರ ಬರೆಯಿರಿ : $9 \times 1 = 9$

22. ಶೀತಲ ಸಮರ ಎಂದರೇನು ?

23. ಭಾರತದಲ್ಲಿದ್ದ ಪೋರ್ಚುಗೀಸರ ಸ್ವಾಧೀನತೆಗಳ ರಾಜಧಾನಿ ಯಾವುದು ?

24. ಯುನಿಸೆಫ್ ( UNICEF ) ಗ್ರೀಟಿಂಗ್ ಕಾರ್ಡುಗಳನ್ನೇ ನಾವೆಲ್ಲರೂ ಆದಷ್ಟು ಕೊಳ್ಳಬೇಕು. ಏಕೆ ?

25. ಇತ್ತೀಚಿನ ದಿನಗಳಲ್ಲಿ ಸಾರ್ಕ್ ಸಂಸ್ಥೆಯ ಹಿನ್ನೆಡೆಗೆ ಕಾರಣವೇನು ?

26. ಮಾವಿನ ಹೊಯ್ಲು ಎಂದರೇನು ?

27. ವನಮಹೋತ್ಸವದ ಮುಖ್ಯ ಉದ್ದೇಶವೇನು ?

28. ಕ್ರಿ.ಶ. 1958 ರಲ್ಲಿ ಚೀನಾದ ಆರ್ಥಿಕ ಸ್ಥಿತಿಯು ಹೇಗೆ ಸುಧಾರಿಸಿತು ?

29. ಹಸಿರು ಕ್ರಾಂತಿ ಎಂದರೇನು ?

30. ಎಕ್ಸಿಂ ಬ್ಯಾಂಕ್ ಸ್ಥಾಪಿಸಿದ್ದು ಏಕೆ ?

V. ಈ ಕೆಳಗಿನ ಪ್ರಶ್ನೆಗಳಿಗೆ **ಎರಡೆರಡು** ವಾಕ್ಯಗಳಲ್ಲಿ ಉತ್ತರ ಬರೆಯಿರಿ : $16 \times 2 = 32$

31. ಕ್ರಿ.ಶ. 1799 ರಲ್ಲಿ ಆಂಗ್ಲರು ಟಿಪ್ಪುವಿನ ವಿರುದ್ಧ ಏಕೆ ದಾಳಿ ಮಾಡಿದರು ?

32. ದಿವಾನ್ ರಂಗಾಚಾರ್ಲುರವರ ಸಾಧನೆಗಳೇನು ?

33. ಭಾರತೀಯ ಗುಡಿ ಕೈಗಾರಿಕೆಗಳ ಮೇಲೆ ಯುರೋಪ್‌ನಲ್ಲಾದ ಕೈಗಾರಿಕಾ ಕ್ರಾಂತಿಯು ಹೇಗೆ ಪರಿಣಾಮ ಬೀರಿತು ?

34. ಕ್ರಿ.ಶ. 1909 ರ ಭಾರತೀಯ ಕೌನ್ಸಿಲ್ ಆಕ್ಟ್‌ನ ಸುಧಾರಣೆಗಳೇನು ?

35. ಕರ್ನಾಟಕಜಲ್ಲಿ ಕರ ನಿರಾಕರಣೆ ಸತ್ಯಾಗ್ರಹವನ್ನು ಹೇಗೆ ಹಮ್ಮಿಕೊಳ್ಳಲಾಯಿತು ?

36. ಸರ್ದಾರ್ ಪಟೇಲರು ಹೈದರಾಬಾದಿನ ಮೇಲೆ ಪೊಲೀಸ್ ಕಾರ್ಯಾಚರಣೆ ಕೈಗೊಳ್ಳಲು ಕಾರಣವೇನು ?

37. ಮೊದಲನೇ ವಿಶ್ವಯುದ್ಧದ ಅವಧಿಯಲ್ಲಿ ಕದನ ಬಾಂಧವ್ಯ ತ್ರಯ ಶಕ್ತಿ ಬಣವನ್ನು ರಚಿಸಿದವರು ಯಾರು ?

38. ಕ್ರಿ.ಶ. 2002 ರಲ್ಲಿ ಅಮೆರಿಕ ಆಫ್ಘಾನಿಸ್ಥಾನದ ಮೇಲೆ ದಾಳಿ ಮಾಡಲು ಕಾರಣವೇನು ?

39. ಮಹಿಳೆಯರ ವಿಕಾಸಕ್ಕೆಂದೇ ಭಾರತ ಸರ್ಕಾರ ಕೈಗೊಂಡಿರುವ ಕಾರ್ಯಕ್ರಮಗಳು ಯಾವುವು ?

40. ಆಹಾರ ಮತ್ತು ಕೃಷಿ ಸಂಸ್ಥೆಯ ( FAO ) ಕಾರ್ಯಗಳೇನು ?

41. ಭಾರತವು ಅಣ್ವಸ್ತ್ರವನ್ನು ತಗ್ಗಿಸುವ ಒಪ್ಪಂದಕ್ಕೆ ವಿರೋಧ ವ್ಯಕ್ತಪಡಿಸಲು ಕಾರಣವೇನು ?

42. ಕರ್ನಾಟಕದಲ್ಲಿ ಸ್ಥಾಪಿಸಿರುವ ಅಣು ಸ್ಥಾವರ ಯಾವುದು ? ಅದರ ಸ್ಥಾಪನೆಗೆ ವಿರೋಧ ವ್ಯಕ್ತಪಡಿಸಲು ಕಾರಣವೇನಾಗಿತ್ತು ?

43. ಮಧ್ಯ ಗಂಗಾ ಬಯಲು ಪ್ರದೇಶಗಳಲ್ಲೇ ಅತಿ ಹೆಚ್ಚಾಗಿ ವ್ಯವಸಾಯಾಧಾರಿತ ಕೈಗಾರಿಕೆಗಳು ಏಕೆ ಕೇಂದ್ರೀಕೃತವಾಗಿದೆ ?

44. ಕೊಳವೆ ಮಾರ್ಗಗಳ ಅನುಕೂಲಗಳೇನು ?

45. ಗ್ರಾಮೀಣ ಪ್ರದೇಶಗಳಿಗೆ ಗೃಹ ಕೈಗಾರಿಕೆಗಳು ಏಕೆ ಸೂಕ್ತವಾಗಿದೆ ?

46. ಆರನೇ ಪಂಚವಾರ್ಷಿಕ ಯೋಜನೆಯು ಸಾಮಾಜಿಕ ನ್ಯಾಯವನ್ನು ಹೇಗೆ ಒದಗಿಸಿತು ?

VI. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ **ಆರು** ವಾಕ್ಯಗಳಲ್ಲಿ ಉತ್ತರಿಸಿ : $6 \times 3 = 18$

47. ಚಿಲ್ಲರೆ ವ್ಯಾಪಾರಿಯು ಗ್ರಾಹಕನನ್ನು ಹೇಗೆ ಸಂತೃಪ್ತಿಪಡಿಸಬಲ್ಲನು ?

48. ರೆಗೂರ್ ಮಣ್ಣು ಮತ್ತು ಕೆಂಪು ಮಣ್ಣು ಎರಡರ ನಡುವಿನ ವ್ಯತ್ಯಾಸಗಳೇನು ?

49. ಲಾಭಕೋರತನವನ್ನು ಹೇಗೆ ತಡೆಗಟ್ಟಬಹುದು ?

50. ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ವಿಫಲತೆಗೆ ಕಾರಣಗಳೇನು ?

51. ಭಾರತದಲ್ಲಿ ಫ್ರೆಂಚರು ತಮ್ಮ ಸಾಮ್ರಾಜ್ಯ ಕಟ್ಟಲಾಗಲಿಲ್ಲ. ಏಕೆ ?

52. ಮಾನ್‌ಸೂನ್ ದೇಶಗಳು ಭತ್ತದ ಬೆಳೆಗೆ ಪೂರಕವಾಗಿದೆ. ಹೇಗೆ ?

VII. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ **ಎಂಟು** ವಾಕ್ಯಗಳಲ್ಲಿ ಉತ್ತರಿಸಿ : $3 \times 4 = 12$

53. ಭಾರತ ಸ್ವಾತಂತ್ರ ಚಳುವಳಿಯಲ್ಲಿ ಬಾಲಗಂಗಾಧರ್ ತಿಲಕರ ಪಾತ್ರವನ್ನು ವಿವರಿಸಿ.

54. ಸ್ವಾತಂತ್ರ ದೊರಕಿದಾಗಿನಿಂದಲೂ ಭಾರತ ಮತ್ತು ಪಾಕಿಸ್ತಾನಗಳ ಮಧ್ಯೆ ಸಂಬಂಧ ಸೌಹಾರ್ದಯುತವಾಗಿಲ್ಲ. ಏಕೆ ?

55. ಭಾರತದ ಆರ್ಥಿಕಾಭಿವೃದ್ಧಿಯಲ್ಲಿ ಕೃಷಿಯು ಹೇಗೆ ಸಹಕಾರಿಯಾಗಿದೆ ?

VIII. 56. ಭಾರತದ ನಕ್ಷೆಯನ್ನು ಬರೆದು, ಅದರಲ್ಲಿ ಕೆಳಗೆ ಕೊಟ್ಟಿರುವುದನ್ನು ಗುರುತಿಸಿ : 1 + 3 = 4

a) ಪಾಕ್ ಜಲಸಂಧಿ

b) ವಿಶಾಖಪಟ್ಟಣ

c) ಭಾಕ್ರಾನಂಗಲ್

***ಸೂಚನೆ :*** ಅಂಧ ವಿದ್ಯಾರ್ಥಿಗಳಿಗೆ ಮಾತ್ರ : ಪರ್ಯಾಯ ಪ್ರಶ್ನೆ : (ಪ್ರಶ್ನೆ ಸಂಖ್ಯೆ 56ಕ್ಕೆ ಬದಲಾಗಿ)

ಭಾರತದ ಜನಜೀವನದ ಮೇಲೆ ಹಿಮಾಲಯ ಪರ್ವತಗಳ ಪ್ರಭಾವವೇನು ? 4